ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೋಂದಾಯಿತ ಸಹಕಾರ ಸಂಘಗಳು ಹಾಗೂ ಬ್ಯಾಂಕ್‌ಗಳ ಸಂಖ್ಯೆ ಎಷ್ಟು? (ಸ್ಥಾಪನಾ ವರ್ಷ, ವಿಳಾಸ ಸಹಿತ ಸಂಪೂರ್ಣ ವಿವರಗಳನ್ನು ನೀಡುವುದು)

ಬಿ.ಜೆ.ಪುಟ್ಟಸ್ವಾಮಿ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ದಿನಾಂಕ: 31.03.2012ಕ್ಕೆ ಇದ್ದಂತೆ ಒಟ್ಟು 32325 ಸಹಕಾರ ಸಂಸ್ಥೆಗಳು ಸಹಕಾರ ಸಂಘಗಳ ನಿಯಮದಡಿ ಕಾರ್ಯನಿರ್ವ-ಹಿಸುತ್ತಿದ್ದು, ಈ ಪೈಕಿ 32054 ಸಹಕಾರ ಸಂಘಗಳು ಹಾಗೂ 271 ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ.

ಆ) ದಿನಾಂಕ: 31.03.2012ಕ್ಕೆ ಇದ್ದಂತೆ ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 1407 ಸಹಕಾರ ಸಂಸ್ಥೆಗಳು ನೋಂದಾಯಿಸಲ್ಪಟ್ಟಿದ್ದು ಈ ಪೈಕಿ 1361 ಸಹಕಾರ ಸಂಘಗಳು ಹಾಗೂ 46 ಸಹಕಾರ ಬ್ಯಾಂಕುಗಳು ನೋಂದಾಯಿಸಲ್ಪಟ್ಟಿರುತ್ತವೆ (ಅನುಬಂಧ_1).

ದೇವಸ್ಥಾನಗಳಿಗೆ ಅನುದಾನ ಬಿಡುಗಡೆ

46 (45)

ಶ್ರೀ ರಹೀಂ ಖಾನ್ (ಬೀದರ್)

ಅ) ಬೀದರ್ ಉತ್ತರ ಮತಕ್ಷೇತ್ರಕ್ಕೆ ಮುಜರಾಯಿ ಇಲಾಖೆಯ ವತಿಯಿಂದ 2009 ರಿಂದ 2012 ರವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ (ವಿವರ ಒದಗಿಸುವುದು)?

ಆ) ಬಿಡುಗಡೆ ಮಾಡಿರುವ ಅನುದಾನದಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ (ವಿವರ ನೀಡುವುದು)?

ಇ) ಬಾಕಿ ಉಳಿದಿರುವ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು) ?

ಕೋಟಾ ಶ್ರೀನಿವಾಸ ಪೂಜಾರಿ (ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಬೀದರ್ ಉತ್ತರ ಮತಕ್ಷೇತ್ರಕ್ಕೆ ಮುಜರಾಯಿ ಇಲಾಖೆಯಿಂದ 2009 ರಿಂದ 2012ರಲ್ಲಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಕ್ರ.ಸಂಖ್ಯೆ	ವರ್ಷ	ಆರಾಧನ ಯೋಜನೆಯಡಿ ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)	ಸಾಮಾನ್ಯ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನ ಮೊತ್ತ (ರೂ.ಲಕ್ಷಗಳಲ್ಲಿ)
1	2009–10	89,284–00	ಮಂಜೂರಾಗಿರುವುದಿಲ್ಲ.
2	2010–11	71,427–00	20,00,000–00
3	2011–12	3,73,750–00	32,88,000–00

ಆ) ಆ ಸಂಬಂಧದ ವಿವರಗಳನ್ನು ಅನುಬಂಧ ದಲ್ಲಿ ಒದಗಿಸಿದೆ.

ಇ) ಅನುದಾನದ ಲಭ್ಯತೆಗನುಸಾರವಾಗಿ ಪರಿಶೀಲಿಸಿ, ಬಿಡುಗಡೆ ಮಾಡಲಾಗುತ್ತಿದೆ.

ಅನುಬಂಧ–1

ಬೀದರ ಉತ್ತರ ವಿಧಾನ ಸಭಾ ಕ್ಷೇತ್ರಕ್ಕೆ ಸಾಮಾನ್ಯ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ.

ಕ್ರಮ. ಸಂಖ್ಯೆ	ವರ್ಷ	ದೇವಸ್ಥಾನದ ಹೆಸರು ಮತ್ತು ಗ್ರಾಮ	ಬಿಡುಗಡೆ ಮೊತ್ತ (ರೂ.ಲಕ್ಷಗಳಲ್ಲಿ)	ಪೂರ್ಣಗೊಂಡ ಕಾಮಗಾರಿಗಳ ಮೊತ್ತ (ರೂ ಲಕ್ಷಗಳಲ್ಲಿ)	ಬಾಕಿ ಉಳಿದಿರುವ ಕಾಮಗಾರಿಗಳ ಮೊತ್ತ
1	2010–11	ಶ್ರೀ ಲಕ್ಷ್ಮೀದೇವಸ್ಥಾನ ಗಾದಗಿ ಗ್ರಾಮ	2.00	2.00	0
2	2010–11	ಶ್ರೀ ಹನುಮಾನ ದೇವಸ್ಥಾನ ನಂದಗಾಂವ್ ಗ್ರಾಮ	2.00	2.00	0
3	2010–11	ಶ್ರೀ ವೀರಭದ್ರೇಶ್ವರ ದೇವಸ್ಥಾನ ಅಲಿಯಂಬರ ಗ್ರಾಮ	2.00	0	2.00
4	2010–11	ಶ್ರೀ ಬೋಮ್ಮಗೊಂಡೆಶ್ವರ ದೇವಸ್ಥಾನ ಗಾದಗಿ ಗ್ರಾಮ	2.00	0	2.00
5	2010–11	ಶ್ರೀ ಲಕ್ಷ್ಮೀ ದೇವಸ್ಥಾನ ಗಾದಗಿ ಗ್ರಾಮ	2.00	2.00	00
6	2010–11	ಶ್ರೀ ರಾಮಕೃಷ್ಣ ವಿವೇಕನಂದ ಆಶ್ವರ ದೇವಸ್ಥಾನ ಬೀದರ ನಗರ	10.00	10.00	0

ಕ್ರಮ. ಸಂಖ್ಯೆ	ವರ್ಷ	ದೇವಸ್ಥಾನದ ಹೆಸರು ಮತ್ತು ಗ್ರಾಮ	ಬಿಡುಗಡೆ ಮೊತ್ತ (ರೂ.ಲಕ್ಷಗಳಲ್ಲಿ)	ಪೂರ್ಣಗೊಂಡ ಕಾಮಗಾರಿಗಳ ಮೊತ್ತ (ರೂ ಲಕ್ಷಗಳಲ್ಲಿ)	ಬಾಕಿ ಉಳಿದಿರುವ ಕಾಮಗಾರಿಗಳ ಮೊತ್ತ
7	2011–12	ಸರ್ಕಾರದ ಆದೇಶ ಸಂಖ್ಯೆ: ಕಂಇ 15/ಮುಅಬಿ 2012, ದಿನಾಂಕ 19–01–2012 ರಲ್ಲಿ ಬೀದರ್ ತಾಲ್ಲೂಕಿನ 45 ಸಂಸ್ಥೆಗಳಿಗೆ	17.88	00	17.88
8	2011–12	ಶ್ರೀ ರುದ್ರಮುನೇಶ್ವರ ಮಠ ಚಾಂಬೋಳ	15.00	15.00	00
		ಒಟ್ಟು	**52.88**	**31.00**	**21.88**

ಸಹಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)